ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.1284/2022

| | | | |
|---|---|---|---|
| ಹೆಸರು | : | ಪ್ರಕಾಶ್ | ಪಿ.ಡಬ್ಲ್ಯೂ :2 |
| ತಂದೆ ಹೆಸರು | : | ಬಚ್ಚೇಗೌಡ | ಸಿ.ಡಬ್ಲ್ಯೂ :2 |
| ವಯಸ್ಸು | : | 22 ವರ್ಷ | |
| ಉದ್ಯೋಗ | : | ಹೋಟೇಲ್ ನಲ್ಲಿ ಕೆಲಸ | |
| ವಾಸಸ್ಥಳ | : | ಗುಬ್ಬಿ | |

ಸಾಕ್ಷಿಯನ್ನು ದಿಃ 07.11.2023 ರಂದು ಕರೆಸಿ ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ಚಾಸಾ - 1 ನಮ್ಮ ಮಾಲೀಕರು. ದಿಃ13.02.2022 ರಂದು ಗುಬ್ಬಿ ಟೌನ್ ಸಿವಿಆರ್ ಬಾರ್ ಎದುರುಗಡೆ ರಾತ್ರಿ 11.00 ಗಂಟೆಗೆ ನಮ್ಮ ಹೋಟೇಲ್ ಕಡೆ ನಾನು ನಡೆದುಕೊಂಡು ಹೋಗುತ್ತಿರುವಾಗ ದ್ವಿಚಕ್ರ ವಾಹನ ಬೈಕ್ ನಂ.ಕೆಎ-06-ಇಎನ್-4804 ಹಿರೋ Splendor ಬೈಕ್ ಹಿಂಭಾಗದಿಂದ ಬಂದು ನನಗೆ ಡಿಕ್ಕಿ ಪಡಿಸಿತು. ಆದರಿಂದ ನನಗೆ ಎಡಗಾಲು, ಸೊಂಟ, ಬೆನ್ನಿಗೆ ಪೆಟ್ಟಾಯಿತು. ಆಗ ಚಾಸಾ- 1 ಅಲ್ಲಿಗೆ ಬಂದರು. ಗುಬ್ಬಿ ಚಾಲುಕ್ಯ ಆಸ್ಪತ್ರೆಗೆ ಕರೆದುಕೊಂಡು ಹೋದರು. ತುಮಕೂರು ಹೇಮಾವತಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿ ಐದು ದಿವಸ ಚಿಕಿತ್ಸೆ ನೀಡಿದರು. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ. ನನಗೆ ಅಪಘಾತ ಪಡಿಸಿದ ಬೈಲ್ ಚಾಲಕನ್ನು ನಾನು ಆ ದಿನ ನೋಡಿದ್ದೇನೆ, ಅವರನ್ನು ಈಗ ನ್ಯಾಯಾಲಯದ ಮುಂದೆ ನೋಡಿ ಗುರುತಿಸುತ್ತೇನೆ. ಅಪಘಾತ ಬೈಕ್ ಚಾಲಕನ ತಪ್ಪಿನಿಂದ ಆಯಿತು. ಬೈಕ್ ಅತೀ ಹಾಗೂ ಅಜಾಗರೂಕತೆಯಿಂದ ಬಂದು ನನಗೆ ಅಪಘಾತ ಮಾಡಿತು.

ಪಾಟೀಸವಾಲು: ಆರೋಪಿ ಪರ ವಕೀಲರಿಂದಃ-

2018 ರಲ್ಲಿ ನಾನು ಉಡುಪಿ ಹೋಟೆಲ್ ಸೇರಿಕೊಂಡೆ. 2018 ರಿಂದ 2022 ರವರಗೆ ಅಲ್ಲಿ ಕೆಲಸ ಮಾಡಿದ್ದೇನೆ. ಅಲ್ಲಿ ನಾನು ಕೆಲಸಕ್ಕೆ ಇದ್ದೆ ಎಂದು ತೋರಿಸಲು ನಾನು ದಾಖಲೆ ಕೊಟ್ಟಿದ್ದೇನೆ. ದಿಃ13.02.2022 ರಂದು ಸಹ ನಾನು ಆ ಹೋಟೆಲ್ ನಲ್ಲಿ ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ನನಗೆ ದಾಖಲೆ ಕೊಟ್ಟಿಲ್ಲ. ನಮ್ಮ ಹೋಟೆಲ್ ಸಿಸಿ ಟಿ ವಿ ಇದೆ ಅದರ ಫೋಟೇಜ್ ಕೊಟ್ಟಿಲ್ಲ.

ಬೆಳಿಗ್ಗೆ 6.30 ಕ್ಕೆ ಹೋಟೆಲ್ ಪ್ರಾರಂಭವಾಗಿ, ರಾತ್ರಿ 10.30 ಕ್ಕೆ ಮುಚ್ಚುತ್ತಾರೆ. ಆ ನಂತರವೂ ನಾವು ಅಲ್ಲೆ ಉಳಿದುಕೊಳ್ಳುತ್ತೇವೆ. ನಮಗೆ ರೂಮ್ ಕೊಟ್ಟಿರುತ್ತಾರೆ. ನಾನು ರೂಮ್ ನಲ್ಲಿ ಉಳಿದುಕೊಂಡಿರಲಿಲ್ಲ. ಇಬ್ಬರು customer ಬಂದಿದ್ದರು. Non-veg ಊಟ ತರಲು ತಿಳಿಸಿದರು. ನಾನು ಆ ದಿನ ಯಾವ ಹೊಟೇಲ್ ನಲ್ಲಿ ಊಟ ತಂದೆ ನೆನಪಿಲ್ಲ. ಆ ಹೋಟೆಲ್ ನ ಬಿಲ್ ನನ್ನ ಬಳಿ ಇಲ್ಲ. ಊಟ ತೆಗೆದುಕೊಂಡ ನಂತರ ಹೋಟೆಲ್ ನಲ್ಲಿ ಬಿಲ್ ಕೊಡುತ್ತಾರೆ, ಅದನ್ನು customer ಗೆ ತೋರಿಸಬೇಕು ಎಂದರೆ ಸರಿ. ಆ ದಿನ ನಾನು customer ಗೆ ಊಟ ತರಲು ಹೋಗಿರಲಿಲ್ಲ ಆಗಾಗಿ ನನಗೆ ಬಿಲ್ ವಿಷಯ ಹೇಳಲು ಆಗುತ್ತಿಲ್ಲ ಎಂದರೆ ಸರಿಯಲ್ಲ. ಪರಿಹಾರಕೋಸ್ಕರ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಬಗ್ಗೆ ದೂರು ನಾನು ಕೊಟ್ಟಿದ್ದೇನೆ. ಅದರ ಕಾಪಿ ನನ್ನ ಬಳಿ ಇಲ್ಲ. ಪೊಲೀಸರಿಗೆ ನಾನು ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಅಪಘಾತವಾದಾಗ ನನಗೆ ಪ್ರಜ್ಞೆ ಇತ್ತು. ಎಂ.ವಿ.ಸಿ. ಕೇಸ್ ನಂ.421/2022 ರಲ್ಲಿ ನನಗೆ ಅಪಘಾತವಾದ ನಂತರ ಪ್ರಜ್ಞೆ ಇರಲಿಲ್ಲ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ಅದರಲ್ಲಿ ನಾನು ನನಗೆ ಅಪಘಾತ ಪಡಿಸಿದ ವಾಹನದ ಸಂಖ್ಯೆ ಗೊತ್ತಿಲ್ಲ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದ ನಂತರ ನನ್ನನ್ನು ಕಾರ್ ನಲ್ಲಿ ಮಣಿಕಂಠ ಮತ್ತು ಅವರ ಸ್ನೇಹಿತಿ ಸಿದ್ದು, ಆಸ್ಪತ್ರೆಗೆ ಕರೆದುಕೊಂಡು ಹೋದರು. ಆ ಕಾರ್ ನಂಬರ್ ನನಗೆ ಗೊತ್ತಿಲ್ಲ. ಗುಬ್ಬಿ ಬಿಟ್ಟಾಗ ಎಷ್ಟು ಸಮಯ ಆಗಿತ್ತು ಗೊತ್ತಿಲ್ಲ. ತುಮಕೂರಿಗೆ ಹೋದಾಗ ಎಷ್ಟು ಸಮಯ ಆಗಿತ್ತು ಗೊತ್ತಿಲ್ಲ. ಚಾಲುಕ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದ ವೈದ್ಯರ ಹೆಸರು ಗೊತ್ತಿಲ್ಲ. ಹೇಮಾವತಿ ಆಸ್ಪತ್ರೆಯಲ್ಲಿ ಡಾ. ರಾಘವೇಂದ್ರ ಚಿಕಿತ್ಸೆ ನೀಡಿದ್ದಾರೆ. ಸಿ.ವಿ.ಆರ್. ಬಾರ್ ನಲ್ಲಿ ನಾನೇ ಕುಡಿದು, ಬಿದ್ದು ಗಾಯ ಮಾಡಿಕೊಂಡು ಪರಿಹಾರಕ್ಕೋಸ್ಕರ ಸುಳ್ಳು ಕೇಸ್ ಮಾಡಿದ್ದೇವೆ ಎಂದರೆ ಸರಿಯಲ್ಲ. ನನಗೆ ಪ್ರಜ್ಞೆ ಇರಲಿಲ್ಲ, ವಾಹನ ಮತ್ತು ಆರೋಪಿಯನ್ನು ನೋಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.